## ಸಂವಿಧಾನ: 75ರ ಸಂಭ್ರಮ

1949ರ ನವೆಂಬರ್ 26 ಭಾರತೀಯ ಸಂವಿಧಾನ ವಿಧ್ಯುಕ್ತವಾಗಿ ಅಂಗೀಕಾರಗೊಂಡ ದಿನ. ಸ್ವಾತಂತ್ರ್ಯಾನಂತರ ಭಾರತ ಪ್ರಜಾಪ್ರಭುತ್ವ ವ್ಯವಸ್ಥೆಗೆ ತನ್ನನ್ನು ಒಪ್ಪಿಸಿಕೊಂಡರೂ, ಇಲ್ಲಿನ ವೈವಿಧ್ಯ ಹಾಗೂ ಸಮಸ್ಯೆಗಳು ಪ್ರಜಾಪ್ರಭುತ್ವದ ಪ್ರಯೋಗಕ್ಕೆ ಹಿನ್ನಡೆ ಉಂಟುಮಾಡುವಂತಿದ್ದವು. ಅನಕ್ಷರತೆ, ಬಡತನ, ಹಲವು ಭಾಷೆಗಳು – ಇವೆಲ್ಲ ತೊಡಕುಗಳ ನಡುವೆಯೂ ಭಾರತೀಯ ಸಂವಿಧಾನ ದೇಶವನ್ನು ಒಗ್ಗೂಡಿಸುವ ಸೂತ್ರ ರೂಪದಲ್ಲಿ ನಮಗೆ ದೊರೆಯಿತು. ಸಂವಿಧಾನವನ್ನು ಅನುಷ್ಠಾನಕ್ಕೆ ತಂದ ಸಂದರ್ಭಕ್ಕೀಗ ಎಪ್ಪತ್ತೈದು ವರ್ಷದ ಸಂಭ್ರಮ. ಈ ವರ್ಷದ ನವೆಂಬರ್ 26ರ 'ಸಂವಿಧಾನ ದಿನ'ವನ್ನು 'ಸಂವಿಧಾನ–75'ರ ಸಂಭ್ರಮವನ್ನಾಗಿಯೂ ಆಚರಿಸಲಾಯಿತು.





## ಕೃಷ್ಣ ಕಣ್ಮರೆ

ಆಧುನಿಕ ಕರ್ನಾಟಕ ಕಂಡ ವರ್ಣರಂಜಿತ ರಾಜಕಾರಣಿ, ಮುತ್ಸದ್ದಿಗಳಲ್ಲೊಬ್ಬರಾದ ಎಸ್.ಎಂ. ಕೃಷ್ಣ ಡಿಸೆಂಬರ್ 10ರಂದು ನಿಧನ. 93 ವರ್ಷಗಳನ್ನು ದೀರ್ಘ ಕಾಲ ಜೀವಿಸಿದ ಕೃಷ್ಣ ಅವರು ಮುಖ್ಯಮಂತ್ರಿಯಾಗಿ ನಾಡಿಗೆ ಹಲವು ಮಹತ್ವದ ಕೊಡುಗೆ ನೀಡಿದವರು. ಇಂದಿನ ಐಟಿ–ಬಿಟಿ ಬೆಂಗಳೂರಿಗೆ ಮುನ್ನುಡಿ ಬರೆದವರಲ್ಲಿ ಕೃಷ್ಣ ಪ್ರಮುಖರು. ಶಾಲಾಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ, ಮಹಿಳಾ ಸಬಲೀಕರಣದ 'ಸ್ತ್ರೀಶಕ್ತಿ' ಯೋಜನೆಗಳನ್ನು ಜಾರಿಗೊಳಿಸಿದ್ದ ಕೃಷ್ಣ ಅವರ ಸರ್ಕಾರ, 'ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2001' ಜಾರಿಗೆ ತಂದಿತ್ತು. ವರನಟ ರಾಜ್‌ಕುಮಾರ್ ಅವರನ್ನು ಕಾಡುಗಳ್ಳ ವೀರಪ್ಪನ್ ಅಪಹರಿಸಿ 108 ದಿನಗಳ ಕಾಲ ಬಂಧನದಲ್ಲಿ ಇರಿಸಿಕೊಂಡಿದ್ದು ಹಾಗೂ ಅವರನ್ನು ಬಂಧನದಿಂದ ಬಿಡಿಸಿದ್ದು ಕೃಷ್ಣ ಅವರ ಸರ್ಕಾರಕ್ಕೆ ಅಗ್ನಿಪರೀಕ್ಷೆಯಾಗಿ ಪರಿಣಮಿಸಿದ್ದ ವಿದ್ಯಮಾನ.

## ಜನನಾಯಕನ ಕಾಮಕಾಂಡ

ಲೋಕಸಭಾ ಚುನಾವಣೆ ಸಂದರ್ಭದಲ್ಲಿ, ಸಂಸದರಾಗಿದ್ದ ಪ್ರಜ್ವಲ್ ರೇವಣ್ಣ ಅವರನ್ನೊಳಗೊಂಡ ಅಶ್ಲೀಲ ದೃಶ್ಯಗಳಿರುವ ಪೆನ್ ಡ್ರೈವ್‌ಗಳು ಹಾಸನದ ಬೀದಿಬೀದಿಗಳಲ್ಲಿ ಹಂಚಿಕೆಯಾದವು. ಅಸಂಖ್ಯಾತ ಮಹಿಳೆಯರ ಮೇಲೆ ಪ್ರಜ್ವಲ್ ನಡೆಸಿದ್ದಾರೆನ್ನಲಾದ ಲೈಂಗಿಕ ದೌರ್ಜನ್ಯಗಳ ಆರೋಪದ ಕಥನಗಳು ನಾಗರಿಕ ಸಮಾಜವನ್ನು ತಲ್ಲಣಗೊಳಿಸುವಂತಿವೆ. 16ರಿಂದ 60 ವರ್ಷ ವಯಸ್ಸಿನವರೆಗಿನ ವಿವಿಧ ವಯೋಮಾನದ ಮಹಿಳೆಯರ ಮೇಲೆ ಲೈಂಗಿಕ ದುಷ್ಕೃತ್ಯಗಳ 2900ಕ್ಕೂ ಹೆಚ್ಚು ವಿಡಿಯೊ ಕ್ಲಿಪ್‌ಗಳು ದೊರೆತಿವೆ ಎನ್ನಲಾಗಿದೆ. ರಾಷ್ಟ್ರದ ಅಭಿವೃದ್ಧಿ, ಹಿತರಕ್ಷಣೆಗೆ ಕಾನೂನು ರೂಪಿಸಬೇಕಾದ ಸ್ಥಾನದಲ್ಲಿರುವ ವ್ಯಕ್ತಿ, ಮಹಿಳೆಯರ ಮೈಮನಗಳನ್ನು ಶೋಷಿಸಿದ್ದಾರೆ ಎನ್ನುವ ಆರೋಪಗಳು ದಿಗ್ಭ್ರಮೆ ಮೂಡಿಸುವಂತಿವೆ. ರಾಜಕಾರಣದ ಅಧಿಕಾರ ಕೀಚಕ ಪ್ರವೃತ್ತಿಗೆ ಎಡೆ ಮಾಡಿಕೊಡುತ್ತಿರುವುದಕ್ಕೆ ಹಾಸನದ ಮಾಜಿ ಜನಪ್ರತಿನಿಧಿಗೆ ಸಂಬಂಧಿಸಿದ ಘಟನೆ ಉದಾಹರಣೆಯಂತಿದೆ.





## ಖಳನ ಪೋಷಾಕಿನಲ್ಲಿ ನಾಯಕ!

ನಟ ದರ್ಶನ್ ಕೊಲೆ ಪ್ರಕರಣವೊಂದರಲ್ಲಿ ಆರೋಪಿಯಾಗಿ ಜೈಲು ಸೇರಬೇಕಾಗಿ ಬಂದುದು 2024ರಲ್ಲಿ ಗಮನಸೆಳೆದ ಸಂಗತಿಗಳಲ್ಲೊಂದು. ತೊಂಬತ್ತು ವರ್ಷಗಳ ಇತಿಹಾಸದ ಕನ್ನಡ ಚಿತ್ರರಂಗದಲ್ಲಿ ನಾಯಕನಟನೊಬ್ಬ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿ ಕಾನೂನು ಕ್ರಮ ಎದುರಿಸಬೇಕಾಗಿ ಬಂದ ಮೊದಲ ಪ್ರಸಂಗವಿದು. ರೇಣುಕಾಸ್ವಾಮಿ ಎನ್ನುವ ವ್ಯಕ್ತಿಯನ್ನು ಬೆಂಗಳೂರಿನ ಪಟ್ಟಣಗೆರೆಯ ಶೆಡ್ ಒಂದರಲ್ಲಿ ಜೂನ್ 9ರಂದು ಕೊಲೆ ಮಾಡಲಾಗಿದೆ ಎನ್ನುವ ಆರೋಪದ ಮೇರೆಗೆ ದರ್ಶನ್, ಆತನ ಗೆಳತಿ ಪವಿತ್ರಾ ಗೌಡ ಸೇರಿ ಹದಿನೇಳು ಮಂದಿಯನ್ನು ಪೊಲೀಸರು ಬಂಧಿಸಿದ್ದರು.